ಒಬ್ಬ ಸದಸ್ಯರು.—ಹ್ಯಾಂಡ್ ಪಂಪ್ ಬದಲು ವೀಲ್ ಪಂಪ್ ಹಾಕಿಸುವ ಬಗ್ಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಇದನ್ನು ಎಲ್ಲೆಲ್ಲಿ ಸಾಧ್ಯೋಗಿಕವಾಗಿ ಹಾಕಿದ್ದಾರು ಅಲ್ಲೆಲ್ಲಾ ಇದರಲ್ಲಿ ಸ್ವಲ್ಪ ಮೆಕಾನಿಕಲ್ ಟ್ರಬಲ್ ಇದೆ ಎಂದು ಗೊತ್ತಾಗಿದೆ. ಈಗ ಒಳ್ಳೆಯಷನ್ ಹಾಕಿ ಸರಿ ಮಾಡುವುದಕ್ಕೆ ಇದಕ್ಕಿಂತ ಉತ್ತಮವಾದ ಮಾರ್ಗ ಇದೆ. ನಮ್ಮ ಅಧಿಕಾರಿಗಳು ಸ್ಥಿತಪ್ರಜ್ಞತವಾಗಿ ನೋಡಿ ದೋಷಗಳನ್ನು ಸರಿ ಮಾಡುತ್ತಾರೆ ಇನ್ನು ಮುಂದೆ ಈ ತರಹದ ಸಮಸ್ಯೆಗಳು ಬರುವುದಿಲ್ಲ ಎಂದು ವಚನ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಬಹಳ ವಚನಗಳನ್ನು ಕೊಟ್ಟಿದ್ದಾರೆ. ಇವತ್ತು ಏಪ್ರಿಲ್ ೧ನೇ ತಾರೀಖು. ಇವತ್ತು ಕೊಟ್ಟ ವಚನಗಳು ಏಪ್ರಿಲ್ ೧ನೇ ತಾರೀಖು ಕೊಟ್ಟ ವಚನಗಳಂತಾಗಬಾರದು ಎಂದು ಕೇಳಿಕೊಳ್ಳುತ್ತಿದ್ದೇನೆ (ನಗು)

(ii) re : provding adequate B.T.S. buses to Yeshwanthpur Area,

ಶ್ರೀ ಪಿ. ರಾಮಮೂರ್ತಿ (ಪುಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೆ, ಯಶವಂತಪುರ ಜನರಿಗೆ ಬಿ.ಟಿ.ಎಸ್. ಬಸ್ ಅವ್ಯವಸೆ ಯಿಂದ ಆಗಿರುವ ಅನಾನುಕೂಲದ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಗುಂಡುರಾವ್ (ಸಾರಿಗೆ ಮತ್ತು ಪ್ರವಾಸೋದ್ಯಮ ಶಾಖೆಗಳ ಮಂತ್ರಿಯವರು).—ಸ್ವಾಮಿ ನನ್ನ ಪ್ರಶ್ನೆಕೆ ಈ ರೀತಿ ಇದೆ.

ಇಡೀ ನಗರದ ಸಂಚಾರದ ಅಗತ್ಯಗಳನ್ನು ಪೂರೈಸಲು ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಈಗ ಹೊಂದಿರುವಂಥ ಸಾಮರ್ಥ್ಯ ಹಾಗೂ ಸಂಪನ್ಮೂಲಗಳನ್ನು ಗಮನಿಸಿದರೆ ಬೆಂಗಳೂರು ನಗರದ ಯಶವಂತಪುರ ಪ್ರದೇಶದಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಒದಗಿಸುತ್ತಿರುವ ಪ್ರಯಾಣ ಸೇವಾ ಸೌಕರ್ಯಗಳು ಆ ಪ್ರದೇಶದ ಪಾಡಿಕೆ ಸಂಚಾರಗಳ ಅಗತ್ಯಗಳನ್ನು ಪೂರೈಸಲು ಸಾಕಷ್ಟಾಗಿವೆ. ನಗರದ ಎಲ್ಲ ಪ್ರದೇಶಗಳಲ್ಲಿ ವಿಶೇಷವಾಗಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವ ವೇಳೆಗಳಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಹೆಚ್ಚು ಬಸ್ಸುಗಳನ್ನು ಓಡಾಡಿಸುವುದು ಅಗತ್ಯ. ಇಂಥ ಸೌಕರ್ಯವನ್ನು ಯಶವಂತಪುರ ಬಡಾವಣೆಗೂ ಒದಗಿಸಬೇಕಾಗುತ್ತದೆ. ವಾಹನಗಳ ಕೊರತೆಯಿಂದಾಗಿ ಮತ್ತು ನಗರದ ಸುತ್ತಮುತ್ತ ಹೊಸ ಬಡಾವಣೆಗಳು ತಲೆ ಎತ್ತಿದಂತೆ ಸಂಚಾರ ಸೌಲಭ್ಯಗಳ ಸಲುವಾದ ಬೇಡಿಕೆ ಹೆಚ್ಚುತ್ತಿರುವುದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವ ವೇಳೆಗಳಲ್ಲಿ ಹೆಚ್ಚು ಬಸ್ಸುಗಳನ್ನು ಓಡಿಸಲು ಸಾಧ್ಯವಾಗುತ್ತಿಲ್ಲ.

೨. ಯಶವಂತಪುರದಿಂದ ಜಯನಗರ, ರಾಘವೇಂದ್ರ ಕಾಲೋನಿ, ಕೆಂಪೇಗೌಡ ಸರ್ಕಲ್, ಸಿಟಿ ಮಾರ್ಕೆಟ್, ಶಿವಾಜಿನಗರ ಮುಂತಾದ ವಿವಿಧ ಸ್ಥಳಗಳಿಗೆ ಹೋಗಿಬರುವ ೭ ಪ್ರಯಾಣ ಮಾರ್ಗಗಳಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಬಸ್ಸುಗಳನ್ನು ಓಡಾಡಿಸುತ್ತಿವೆ. ಈ ವ್ಯವಸ್ಥೆಯಂತೆ ಪ್ರತಿದಿನ ೨೯ ಬಸ್ಸುಗಳು ಹೊಡಾಡುತ್ತಿದ್ದು ಪ್ರತಿದಿನ ಪ್ರತಿ ಮಾರ್ಗದಲ್ಲೂ ೨೭೦ ಟ್ರಿಪ್‌ಗಳಾಗುತ್ತವೆ. ಈ ಬಸ್ಸುಗಳಲ್ಲದೆ, ಯಶವಂತಪುರ ಬಡಾವಣೆಯ ಅಚೆಗೆ ಪುರಸಭಾ ಹೊರವಲಯಗಳವರೆಗೆ ಹೋಗಿ ತಲುಪುವ ಉಪನಗರ ಸಾರಿಗೆ ಬಸ್ಸುಗಳು ಯಶವಂತಪುರ ಪ್ರದೇಶದ ಮೂಲಕ ಹಾದುಹೋಗುತ್ತಿರುವ ಕಾರಣ ಅಲ್ಲಿನ ಜನಗಳ ಸಂಚಾರದ ಅಗತ್ಯಗಳು ಈಡೇರುತ್ತಿವೆ.

೩. ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಈಗ ಪ್ರತಿದಿನ ೪೯೬ ಬಸ್ಸುಗಳನ್ನು ಓಡಾಡಿಸುತ್ತಿದೆ ಸದ್ಯದಲ್ಲೇ ಇನ್ನೂ ೬೦ ಬಸ್ಸುಗಳನ್ನು ಓಡಾಡಿಸುವುದಾಗಿ ಆಗತ್ಯವಾಗಿದೆ. ಈಗ ನಾವು ಮಾಡಿದ ಅಂದಾಜಿನ ಮೇರೆಗೆ ಈ ೬೦ ಬಸ್ಸುಗಳ ಪೈಕಿ ೭ ಬಸ್ಸುಗಳನ್ನು ಯಶವಂತಪುರ ಬಡಾವಣೆಯಲ್ಲಿ ಓಡಾಡಿಸಬೇಕಾಗುವುದು. ಈಗಿರುವ ಬಸ್ಸುಗಳಿಗಿಂತ ಹೆಚ್ಚಿಗೆಯಾಗಿ ಇನ್ನಷ್ಟು ಬಸ್ಸುಗಳನ್ನು ಪಡೆದ ಹೊರತು ಹೆಚ್ಚು ಬಸ್ಸುಗಳನ್ನು ಓಡಾಡಿಸಲು ಸಾಧ್ಯವಾಗಲಾರದು.

೪. ಸದ್ಯ, ಯಶವಂತಪುರ ಬಡಾವಣೆಗೆ ಸಂಚಾರ ಸೌಕರ್ಯ ಒದಗಿಸುವ ೭ ಪ್ರಯಾಣ ಮಾರ್ಗಗಳು ಈ ಮುಂದಿನಂತಿವೆ.

ಕ್ರಮ ಸಂಖ್ಯೆ	ಪ್ರಯಾಣ ಮಾರ್ಗ ಸಂಖ್ಯೆ	ಪ್ರಯಾಣ ಮಾರ್ಗ		ಪ್ರತಿದಿನ ಓಡಾಡುತ್ತಿರುವ ಬಸ್ ಗಳ ಸಂಖ್ಯೆ	ಪ್ರತಿದಿನ ರಿಟರ್ನ್ ಟ್ರಿಪ್ ಗಳ ಸಂಖ್ಯೆ
		ಇಂದ	ಗೆ		
೦	೨	೩	೪	೫	೬
೧	೨	ಯಶವಂತಪುರ	ಜಯನಗರ IV ಬ್ಲಾಕ್	೬	೩೯
೨	೫೨	,,	ರಾಘವೇಂದ್ರ ಕಾಲೋನಿ	೫	೩೭
೩	೯೦	,,	ಕೆಂಪೇಗೌಡ ಸರ್ಕಲ್	೪	೬೫
೪	೯೧	,,	ಸಿಟಿ ಮಾರ್ಕೆಟ್	೩	೨೮
೫	೯೨	,,	ಶಿವಾಜಿನಗರ ವಸಂತನಗರ ಮಾರ್ಗ	೪	೩೭
೬	೯೩	,,	ಶಿವಾಜಿನಗರ ಸ್ವಾಸ್ತಿಕ್ ಮಾರ್ಗ	೪	೩೬ ರಸ್ತೆ ರೈಲುಗಳು
೭	೯೪	,,	ಶಿವಾಜಿನಗರ ಮೋಟ್ರಿ ಸರ್ಕಲ್ ಮಾರ್ಗ	೩	೨೮
				೨೯	೨೭೦

೫. ಯಶವಂತಪುರ ಸರ್ಕಲ್ಲಿನಿಂದ ಪ್ರಾರಂಭವಾಗುವ ಮತ್ತು ಅಲ್ಲಿಗೆ ಆಪೈರಾಗುವ. ಈಗಿರುವ ಕೆಲವು ಬಸ್ಸುಗಳ ಪೈಕಿ ಕೆಲವನ್ನಾದರೂ ಯಶವಂತಪುರ ರೈಲ್ವೆ ನಿಲ್ದಾಣದ ಸರ್ಕಲ್‌ವರೆಗೆ ವಿಸ್ತರಿಸ ಬೇಕೆಂದು ಈ ಹಿಂದೆ ಕೆಲವು ಕೋರಿಕೆಗಳು ಮತ್ತು ಸೂಚನೆಗಳು ಬಂದಿದ್ದವು.

ಈ ಸೂಚನೆ ಹಾಗೂ ಕೋರಿಕೆಗಳನ್ನು ವಿವರವಾಗಿ ಪರಿಶೀಲಿಸಲಾಗಿದ್ದು, ಅವು ಕಾರ್ಯ ಸಾಧ್ಯ ವಿಲ್ಲ ಎಂದು ಕಂಡುಬಂದಿದೆ. ರೈಲ್ವೆ ನಿಲ್ದಾಣದ ಸರ್ಕಲ್ಲಿಗೆ ಹೋಗುವ ರಸ್ತೆಯು ಅಗಲ ಕಿರಿದಾಗಿದ್ದು, ಆ ರಸ್ತೆಯಲ್ಲಿ ದಾರಿ ವ್ಯಾಪಾರಿಗಳು ಹಾಗೂ ಸಣ್ಣ ಪುಟ್ಟ ತರಕಾರಿ ಮಾರಾಟಗಾರರು ತುಂಬಿರುತ್ತಾರೆ. ಈ ರಸ್ತೆಯ ಮೇಲೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಕಂಬಗಳು ಬಹಳಷ್ಟು ಇರುವುದರಿಂದ ವಾಹನಗಳ ಸುಲಭ ಓಡಾಟಕ್ಕೆ ಅಡಚಣೆ ಉಂಟಾಗುತ್ತದೆ. ವಾರದ ಸಂತೆಯು ರಸ್ತೆಯುದ್ದ ಕ್ಕೂ ನಡೆಯುವುದರಿಂದ ಲಘು ವಾಹನಗಳ ಓಡಾಟವೂ ಅಸಾಧ್ಯವಾಗುತ್ತದೆ, ಇಂಥ ರಸ್ತೆಯಲ್ಲಿ ಪ್ರಯಾಣಿ ಕರ ಬಸ್ಸನ್ನು ಓಡಾಡಿಸುವುದು ಸುರಕ್ಷಿತವೂ ಅಲ್ಲ, ಅಪೇಕ್ಷಣೀಯವೂ ಅಲ್ಲ. ಯಶವಂತಪುರದಲ್ಲಿ ರೈಲ್ವೆ ನಿಲ್ದಾಣದ ಇದಿರು ಲಭ್ಯವಿರುವ ಸ್ಥಳವು ಬಸ್ ನಿಲ್ದಾಣವನ್ನು ವಿಸ್ತರಿಸಲು ಸಾಲದಷ್ಟು ಚಿಕ್ಕ ದಾಗಿದೆ. ಯಶವಂತಪುರ ಸರ್ಕಲ್ಲಿನಿಂದ ರೈಲ್ವೆ ನಿಲ್ದಾಣದ ಸರ್ಕಲ್‌ವರೆಗಿನ ದೂರ ಒಂದು ಕಿಲೋ ಮೀಟರು ಮಾತ್ರ ಈ ಅಂತರವನ್ನು ಕಾಲ್ನಡಿಗೆಯಿಂದ ಕ್ರಮಿಸುವುದು ಕಷ್ಟವೇನಲ್ಲ.

ಪರಿಸ್ಥಿತಿ ಹೀಗಿರುವಾಗ ಈಗ ಓಡಿಸುತ್ತಿರುವ ಸಾರಿಗೆ ಸೌಕರ್ಯ ಸಾಕಷ್ಟಾಗಿದೆಯೆಂದು ಭಾವಿಸಲಾಗಿದೆ.

10-00 A. M.

ಶ್ರೀ ಪಿ. ಧಾಂದೇವ್.--ಅಧ್ಯಕ್ಷರೆ, ನಾನು ನನ್ನ ಗಮನ ಸೆಳೆಯತಕ್ಕ ಸೂಚನೆಯನ್ನು ಕನ್ನಡ ದಲ್ಲಿ ಕೊಟ್ಟಿದೆ, ಆದಕ್ಕೆ ನಮ್ಮ ಮಾನ್ಯ ಮಂತ್ರಿಗಳು ಕನ್ನಡದಲ್ಲಿಯೇ ಉತ್ತರ ಕೊಟ್ಟಿದ್ದಾರೆ ಅದಕ್ಕಾಗಿ ನಾನು ಅವರನ್ನು ಮೊದಲಿದೆಯದಾಗಿ ವಂದಿಸುತ್ತೇನೆ. ಈಗ ನನ್ನ ಮೊದಲನೆಯ ಪ್ರಶ್ನೆ ನಮ್ಮ ಮಂತ್ರಿಗಳಾದ ಗುಂಡೂರಾವ್ ಅವರು ಯಾವುದಾದರೂ ಬಿ.ಟಿ.ಎಸ್. ಬಸ್ಸಿನಲ್ಲಿ ಪ್ರಯಾಣ ಮಾಡಿ ದ್ದಾರೆಯೇ ದಯವಿಟ್ಟು ತಿಳಿಸಬೇಕು. ಎರಡನೆಯದಾಗಿ ಹೇಳಬೇಕು ಎಂದರೆ ಈಗ ಮಾನ್ಯ ಮಂತ್ರಿ

ಗಳು ಏನು ಉತ್ತರ ಹೇಳಿದ್ದಾರೆ ಅದನ್ನು ನಾನು ಈಗಾಗಲೇ ಅಧಿಕಾರಿಗಳಿಂದ ಪಡೆದಿದ್ದೇನೆ. ನಾನು ಅಧಿಕಾರಿಗಳಿಂದ ಬಂದ ಉತ್ತರ ಸಮರ್ಪಕವಾಗಿಲ್ಲ ಎನ್ನುವ ದೃಷ್ಟಿಯಿಂದ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಪ್ರಯತ್ನ ಮಾಡಿದೆ. ಮಾನ್ಯ ಗುಂಡೂರಾವ್ ಅವರ ಬಗ್ಗೆ ಬಹಳ ಕೇಳಿದ್ದೇನೆ. ಅವರ ಅಧಿಕಾರಶಾಹಿ ಪದ್ಧತಿ ಏನು ಇದೆ ಅದರಲ್ಲಿ ಬಹಳ ಮುಂದಾಳತ್ವ ವಹಿಸಿದ್ದಾರೆ. ಇವೊತ್ತು ಅಧಿಕಾರಿಗಳು ಏನೊಂದು ಉತ್ತರವನ್ನು ಸರ್ಕಾರಕ್ಕೆ ತಿಳಿಸಿದ್ದಾರೆ. ಆದೇ ಉತ್ತರವನ್ನು ಕೊಟ್ಟಿದ್ದಾರೆ, ಇದರಿಂದ ಏನೂ ಪ್ರಯೋಜನವಾದಂತಾಗಲಿಲ್ಲ, ಯಶವಂತಪುರದಲ್ಲಿ ಸರಿಯಾದಂಥ ಬಸ್ಸುಗಳ ಸೌಕರ್ಯ ಇಲ್ಲ. ಮೂರು ಲಕ್ಷ ಜನರು ಇರತಕ್ಕಂಥಹ ಯಶವಂತಪುರ ಪ್ರದೇಶ ಇಂಡಸ್ಟ್ರೀಯಲ್ ಸಬರ್ಬ ಆಗಿದೆ. ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರವ ಮೊದಲನೆ ಪ್ಯಾರದಲ್ಲೆ ಏನು ಹೇಳಿದ್ದಾರೆ ಎಂದರೆ, ಬೆಂಗಳೂರು ನಗರದ ಯಶವಂತಪುರ ಪ್ರದೇಶದಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಓಡಗಿಸುತ್ತಿರುವ ಪ್ರಯಾಣ ಸೇವಾ ಸೌಕರ್ಯಗಳು ಆ ಪ್ರದೇಶದ ಪಾಡಿಕೆ ಸಂಚಾರಗಳ ಅಗತ್ಯಗಳನ್ನು ಪೂರೈಸಲು ಸಾಕಷ್ಟಿಗಿದೆ. ಎಂದು ಹೇಳಿ. ಹಾಗೆ ಎರಡನೇ ವಾಕ್ಯದಲ್ಲಿ ಏನು ಹೇಳಿದ್ದಾರೆ ಎಂದರೆ ನಗರದ ಎಲ್ಲ ಪ್ರದೇಶಗಳಲ್ಲಿ ವಿಶೇಷವಾಗಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವು ವೇಳೆಗಳಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಹೆಚ್ಚು ಬಸ್ಸುಗಳನ್ನು ಓಡಾಡಿಸುವುದು ಅಗತ್ಯ. ಇಂಥ ಸೌಕರ್ಯವನ್ನು ಯಶವಂತಪುರ ಬಡಾವಣೆಗೂ ಒದಗಿಸಬೇಕಾಗುತ್ತದೆ, ಎಂದು ಹೇಳಿದ್ದಾರೆ. ಆಂದರೆ, ಮೊದಲನೇ ಪ್ಯಾರದ ವಾಕ್ಯದಲ್ಲೆ ಅಲ್ಲಿಗೆ ಸಾಕಷ್ಟು ಕೊಟ್ಟಿದ್ದೇವೆ ಎಂದು ಹೇಳಿ, ಆದೇ ಪ್ಯಾರದ ಎರಡನೇ ವಾಕ್ಯದಲ್ಲೇ ಅಲ್ಲಿಗೆ ಸಾಕಷ್ಟು ಕೊಡುವುದು ಅಗತ್ಯ ಇದೆ ಕೊಡಬೇಕು ಎಂದು ಹೇಳಿದ್ದಾರೆ. ಇವೊತ್ತು ಯಶವಂತಪುರ ಮಧ್ಯ ಭಾಗದಲ್ಲಿ ಯಾವ ಬಸ್ಸುಗಳು ಓಡಾಡುತ್ತಿಲ್ಲವಾದ್ದರಿಂದ ಜನರಿಗೆ ತೊಂದರೆಯಾಗಿದೆ ಎಂದು ಕೇಳಿದರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಯಶವಂತಪುರ ಬಡಾವಣೆಯು ಆಚೆಗೆ ಸರಸಭಾ ಹೊರವಲಯಗಳವರೆಗೆ ಹೋಗಿ ತಲುಪುವ ಉಪನಗರ ಸಾರಿಗೆ ಬಸ್ಸುಗಳು ಯಶವಂತಪುರ ಪ್ರದೇಶದ ಮೂಲಕ ಹಾದು ಹೋಗುತ್ತಿರುವ ಕಾರಣ ಅಲ್ಲಿನ ಜನಗಳ ಸಂಚಾರದ ಅಗತ್ಯಗಳು ಈಡೇರುತ್ತಿವೆ ಎಂದು ಹೇಳಿದ್ದಾರೆ. ಇವೊತ್ತು ಯಶವಂತಪುರ ಮಧ್ಯ ಭಾಗದಲ್ಲಿ ಬಸ್ಸುಗಳನು ಓಡಿಸುವುದು ಅಗತ್ಯ ಇದೆ ಎಂದು ಕೇಳಿದರೆ, ಆ ಪ್ರದೇಶದ ಮೂಲಕ ಹಾದುಹೋಗುತ್ತಿರುವುದರಿಂದ ಅಲ್ಲಿ ಓಡಿಸುವುದು ಅಗತ್ಯ ಇಲ್ಲ ಎಂದು ಹೇಳಿದರೆ ಜನತೆಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆಯೆ, ಇವೊತ್ತು ಅಲ್ಲಿ ಒಂದು ದೊಡ್ಡ ರಸ್ತೆ ಮಾಡಿದ್ದಾರೆ, ಆದರೂ ಸಹ ಅಲ್ಲಿ ಬಸ್ಸುಗಳನ್ನು ಓಡಿಸುತ್ತಾ ಇಲ್ಲ, ಆದರೆ ಬಗ್ಗೆ ವಿವರ ಕೊಡಬೇಕು. ಇನ್ನು ಮೂರನೇ ಪ್ಯಾರದಲ್ಲಿ ಈಗ ಪ್ರತಿದಿನ ೪೯೬ ಬಸ್ಸುಗಳನ್ನು ಓಡಾಡಿಸುತ್ತಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಯಾವುದರ ಬಗ್ಗೆ ಅನುಮಾನ ಇದೆ ಅದನ್ನು ಮಾತ್ರ ಕೇಳಬೇಕು ಸುಮ್ಮನೆ ವಿಮರ್ಶೆ ಮಾಡಿಕೊಂಡು ಹೋದರೆ ಸರಿ ಇಲ್ಲ. ತಮಗೆ ಯಾವ ಸಮಾಚಾರ ಬೇಕು ಅದನ್ನು ಮಾತ್ರ ಕೇಳಿ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಮಾನ್ಯಮಂತ್ರಿಗಳು ಈಗಿರುವ ಬಸ್ಸುಗಳಿಗಿಂತ ಹೆಚ್ಚಿಗೆಯಾಗಿ ಇನ್ನಷ್ಟು ಬಸ್ಸುಗಳನ್ನು ಓಡಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ಏನಾದರೂ ಪ್ರಯತ್ನ ನಡೆದಿದೆಯೇ ಎಂದು ಕೇಳುತ್ತೇನೆ. ಹಾಗೆ ಹೆಚ್ಚು ಬಸ್ಸುಗಳನ್ನು ಬಿ.ಟಿ.ಎಸ್.ಗೆ ಪಡೆಯುವುದು ಏನಾದರೂ ನಡೆದಿದೆಯೇ. ಇನ್ನು ೫ನೇ ಪ್ಯಾರದಲ್ಲಿ ಮಾನ್ಯಮಂತ್ರಿಗಳು ರಸ್ತೆಯು ಆಗಲ ಕರಿದಾಗಿದ್ದು, ಆ ರಸ್ತೆಯ ಮೇಲೆ ಕರ್ನಾಟಕ ವಿಧಾನಸೌಧ ಮಂಡಲಿಯ ಕಂಬಗಳು ಬಹಳಷ್ಟು ಇದ್ದು ಬಸ್ ನಿಲ್ದಾಣ ಮಾಡಬೇಕಾಗಿರತಕ್ಕ ಸ್ಥಳ ಬಹಳ ಚಿಕ್ಕದಾಗಿದೆ ಎಂದ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ಬರಲೆ ನಾನೇ ಕರೆದುಕೊಂಡು ಹೋಗಿ ತೋರಿಸುತ್ತೇನೆ, ಅಲ್ಲೆ ೫ನೆ ಆಡಿ ಆಗಲದ ರಸ್ತೆ ಇದೆ. ಒಂದೇ ಒಂದು ಎಲೆಕ್ಟ್ರಿಸಿಟಿ ಕಂಬ ಬರುತ್ತದೆ ಆಷ್ಟೆ ಬಸ್ ನಿಲ್ದಾಣ ಮಾಡತಕ್ಕಂತಹ ಸ್ಥಳ ಸಾಕಷ್ಟು ಇದೆ, ಅದರೂ ಕೂಡ ಇವರು ಜಾಗ ಇಲ್ಲ ಎಂದು ಹೆಳಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇವುಗಳೆಲ್ಲರ ಬಗ್ಗೆ ಪೂರ್ಣ ವಿವರ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಹಾಕಿರತಕ್ಕ ಮೊದಲನೆ ಪ್ರಶ್ನೆ ಎಂದರೆ ಮಾನ್ಯ ಮಂತ್ರಿಗಳು ಬಿ.ಟಿ.ಎಸ್. ಬಸ್ಸಿನಲ್ಲಿ ಪ್ರಯಾಣ ಮಾಡಿದ್ದಾರೆಯೇ ಎಂದು ಕೇಳಿದ್ದಾರೆ. ಆ ಬಗ್ಗೆ ಉತ್ತರ ಹೇಳಬೇಕು ಎಂದರೆ ನಾನು ಮಾನ್ಯ ಸದಸ್ಯರಿಗಿಂಥ ಹೆಚ್ಚು ಪ್ರಯಾಣವನ್ನು ಬಸ್ಸಿನಲ್ಲಿ ಮಾಡಿದ್ದೇನೆ. ಹಿಂದೆ ನಾನು ಬಸ್ ಏಜೆಂಟಾಗಿ ಕೆಲಸ ಮಾಡಿದ್ದೇನೆ. ಆದರ ಬಗ್ಗೆ ನನಗೆ ಸಾಕಷ್ಟು ಅನುಭವ ಇದೆ. ಬಸ್ಸಿನೊಳಗೆ ಕುಳಿತುಕೊಂಡು ಹೋಗುವುದು, ಫುಟಪಾತಮೇಲೆ ನಿಂತುಕೊಂಡು

ಹೋಗುವುದು, ಸ್ಟಾಂಡಿಂಗ್ ನಿಂತುಕೊಂಡು ಹೋಗುವುದು, ಎಲ್ಲ ಅನುಭವ ನನಗೆ ಇದೆ. ಇನ್ನು ಎರಡನೆಯದಾಗಿ ಯಶವಂತಪುರದ ಮಧ್ಯೆ ಬಸ್ಸುಗಳು ಬರುವುದಿಲ್ಲ ಎಂದು ಕೇಳಿದ್ದಾರೆ, ಆ ಬಗ್ಗೆ ನಾನು ಈಗಾಗಲೇ ಯೋಚನೆ ಮಾಡಿದ್ದೇನೆ. ಈ ಅಸೆಂಬ್ಲಿ ಮುಗಿದ ತಕ್ಷಣ ಬೆಂಗಳೂರು ನಗರದ ಎಲ್ಲ ಶಾಸನ ಸಭಾಸದಸ್ಯರನ್ನು ಕರೆಯಿಸಿ ಯಾವ ಯಾವ ಭಾಗದಲ್ಲಿ ಏನು ಕೊರತೆ ಇದೆ, ಅವರೆಲ್ಲರ ಸಲಹೆ ಪಡೆದು ಎಷ್ಟರ ಮಟ್ಟಿಗೆ ಕಾರ್ಪೊರೇಷನ್‌ನಿಂದ ಸರಿಪಡಿಸಲಿಕ್ಕೆ ಸಾಧ್ಯ ಇದೆ, ಅಷ್ಟರಮಟ್ಟಿಗೂ ಬೆಂಗಳೂರು ನಾಗರೀಕರಿಗೆ ಹೆಚ್ಚಿನ ಸಂಚಾರ ಸೌಲಭ್ಯವನ್ನು ಕಲ್ಪಿಸಿಕೊಡಬೇಕು ಎನ್ನುವುದೇ ನನ್ನ ಪ್ರಧಾನ ಇಚ್ಛೆ ಈ ಮಾರ್ಗದಲ್ಲಿ ತಮಿಳ್ಲರ ಸಲಹೆ ಪಡೆದು ಆದಷ್ಟು ಬೇಗ ಆ ಕೊರತೆಯನ್ನು ನೀಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಈ ಸಭೆಯಲ್ಲಿ ಆಶ್ವಾಸನೆ ಕೊಡುತ್ತೇನೆ. ಇನ್ನು ನಮ್ಮ ಮಾನ್ಯ ಸದಸ್ಯರು ನಮ್ಮ ಕಡೆಗ ಬನ್ನಿ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ ಎಂದೇ ಹೇಳಿದರು. ನಾನು ಯಶವಂತಪುರದ ಭಾಗವನ್ನು ನೋಡಿದ್ದೇನೆ. ಅಲ್ಲಿರತಕ್ಕ ರಸ್ತೆ ಬಹಳ ಚಿಕ್ಕದಾಗಿದೆ. ಬೇಕಾದರೆ ನಮ್ಮ ಇಂಜಿನಿಯರ್ ಅವರನ್ನು ಸಹ ಕರೆದುಕೊಂಡು ತಮ್ಮ ಜೊತೆಯಲ್ಲೇ ಬರುತ್ತೇನೆ. ನನಗೆ ಡ್ರೈವಿಂಗ್ ಕೊಡ ಗೊತ್ತಿದೆ. ಲೈಸೆನ್ಸ್ ಕೂಡ ನನ್ನ ಹತ್ತಿರ ಇದೆ, ನೀವು ಬೇಕಾದರೆ ನನ್ನ ಪಕ್ಕದಲ್ಲಿಯೇ ಕುಳಿತುಕೊಳ್ಳಿ, ಇಬ್ಬರೂ ಹೋಗೋಣ, ಅಲ್ಲಿ ಬಸ್ಸು ಹೋಗುವುದಕ್ಕೆ ಅವಕಾಶ ಇದ್ದರೆ ಅಲ್ಲಿಯೇ ಆರ್ಡರ್ ಮಾಡಿ ಕೊಡುತ್ತೇನೆ. ಇನ್ನು ವಿದ್ಯುಚ್ಛಕ್ತಿಯ ಕಂಬಗಳಿಂದ ಅಲ್ಲಿ ಹೆಚ್ಚಿಗೆ ತೊಂದರೆಯಾಗುವುದಿಲ್ಲ ಎಂದು ಹೇಳಿದಿರಿ, ಆ ರೀತಿ ಆ ಕಂಬಗಳಿಂದ ತೊಂದರೆಯಾಗುವುದಿಲ್ಲ ಎನ್ನುವುದು ನಮ್ಮ ಮನಸ್ಸಿಗೆ ಕಂಡುಬಂದರೆ, ವಿದ್ಯುಚ್ಛಕ್ತಿ ಇಲಾಖೆಯವರೊಡನೆ ವ್ಯವಹಾರ ಮಾಡಿ, ಆ ಕಂಬಗಳನ್ನು ಬೇರೆ ಕಡೆ ಹಾಕಿಸಲಿಕ್ಕೆ ಏನಾದರೂ ಸಾಧ್ಯವಾಗುವುದಾದರೆ, ಆ ಕಾರ್ಯಕ್ರಮ ಕೈಗೊಳ್ಳುತ್ತೇನೆ. ಇನ್ನು ಬೆಂಗಳೂರು ನಗರಕ್ಕೆ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳು ಬೇಕಾಗಿವೆ, ಈಗ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆ ಸಾಲದು, ಏಕೆಂದರೆ ಪ್ರತಿವರ್ಷ ಹೊಸಹೊಸ ಬಡಾವಣೆಗಳು ಬರುತ್ತಿವೆ. ಇವುಗಳನ್ನೆಲ್ಲಾ ಬಗೆಹರಿಸುವುದಕ್ಕೆ ಕಾರ್ಪೊರೇಷನ್ ಆದಷ್ಟು ಪ್ರಯತ್ನಪಡತ್ತದೆ, ಈಗತಾನೆ ನನಗೆ ಈ ಇಲಾಖೆ ಬಂದಿದೆ, ಅವುಗಳನ್ನೆಲ್ಲಾ ಸರಿಪಡಿಸಲಿಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ. ಇನ್ನು ಮುಂದೆ ನಮ್ಮ ಬೆಂಗಳೂರು ನಗರದ ಜನತೆಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಕ್ರಮತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ನಾನು ಈ ಸದನದಲ್ಲಿ ಕೊಡುವುದಕ್ಕೆ ಇಷ್ಟ ಪಡುತ್ತೇನೆ.

(*iii*) *re : Deay in Settling Family Pensions Cases of erst whi'e. Bombay Area.*

SRI B. B. SAYANAK (Belgaum) — I call the attention of the Minister for Rural Development and Panchayati Raj to the hardship caused due to the delay in settling Family Pension cases of widows of the deceased pensioners who had served in Ex-District Board of earstwhile Bombay State.

SRI K. PRABHAKAR (Minister for Rural Development and Panchayat Raj).— I beg to state as follows :

There are no specific instances of widows of the deceased employees of former District Local Bodies of Bombay-Karnataka area who have not been paid pension for want of clarification from Government, received in Government either from the parties or from the Accountant General.

However, regarding retirement benefits sanctioned, to the employees of former District Local Boards of Bombay-Karnataka Area and other areas, in G. O. No. BDC 96 BDB 74, dated 16th April 1976, the Accountant General in his letter dated 28th September 1976